ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ. ಮಲ್ಲೇಶ್ವರಂ. ಬೆಂಗಳೂರು

********************************************************************************

ಸಂಖ್ಯೆ : ಗಣಕಶಾಖೆ/ನೂ.ಜಾ.ಹೋ./01/2020-21 ದಿನಾಂಕ: 01-01-2021

## ಸುತ್ತೋಲೆ

ವಿಷಯ: **GIGW** ನಿಯಮಗಳಂತೆ ಮಂಡಳಿಯ ಜಾಲತಾಣವನ್ನು ನೂತನ ಸರ್ವರ್‌ನಲ್ಲಿ ಅಳವಡಿಸಿರುವ ಬಗ್ಗೆ

ಉಲ್ಲೇಖ: ಮಾನ್ಯ ಯೋಜನಾ ನಿರ್ದೇಶಕರು, ವೆಬ್ ಪೋರ್ಟಲ್, ಇ–ಆಡಳಿತ ಕೇಂದ್ರ, ಶಾಂತಿನಗರ, ಬೆಂಗಳೂರು, ಇವರ ಪತ್ರ ಸಂ: CEG- 22025/1/2018-KWP-CeG ದಿನಾಂಕ: 25-06-2020

*******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಜಾಲತಾಣವಾದ www.kseeb.kar.nic.in ಗೆ ಪರ್ಯಾಯವಾಗಿ ಇ–ಆಡಳಿತ ಕೇಂದ್ರದ ನೆರವಿನಿಂದ www.sslc.karnataka.gov.in ವನ್ನು ಅಭಿವೃದ್ಧಿಪಡಿಸಲಾಗಿದ್ದು, ಸಾರ್ವಜನಿಕರ ಉಪಯೋಗಕ್ಕೆ ದಿನಾಂಕ 04-01-2021 ರಿಂದ ಒದಗಿಸಲಾಗುವುದು.

ಹಿಂದಿನ ಜಾಲತಾಣದಲ್ಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಂಬಂಧಿಸಿದ ಚಟುವಟಿಕೆಗಳ ಆನ್‌ಲೈನ್ ಕಾರ್ಯಗಳು, ಶಾಲಾ ಲಾಗಿನ್, ಬಿ.ಇ.ಓ.ಲಾಗಿನ್, ಇ.ಓ.ಲಾಗಿನ್ ಹಾಗೂ ಇನ್ನಿತರ ಸೇವೆಗಳು, ಇನ್ನು ಮುಂದೆ ಈ ನೂತನ ಜಾಲತಾಣದಲ್ಲಿಯೇ ಲಭ್ಯವಾಗಲಿದೆ.

ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಮುಖ್ಯಶಿಕ್ಷಕರ ಸಭೆಯಲ್ಲಿ ಈ ವಿಷಯವನ್ನು ಉಲ್ಲೇಖಿಸಿ ಮಾಹಿತಿ ನೀಡುವುದು.

ನೂತನ ಜಾಲತಾಣದ URL : www.sslc.karnataka.gov.in

(ಸುಮಂಗಲ. ವಿ) 4/1/21
ನಿರ್ದೇಶಕರು, ಪರೀಕ್ಷೆಗಳು

ಅಗತ್ಯ ಕ್ರಮಕ್ಕಾಗಿ :

1. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ
4. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರೌಢಶಾಲೆಯ ಮುಖ್ಯಸ್ಥರುಗಳಿಗೆ
5. ನಿರ್ದೇಶಕರು (ಪರೀಕ್ಷೆಗಳು) / ಕಾರ್ಯದರ್ಶಿಗಳ ಆಪ್ತ ಶಾಖೆಗೆ
6. ಮಂಡಳಿಯ ಎಲ್ಲಾ ಶಾಖೆಗಳ ಶಾಖಾಧಿಕಾರಿಗಳಿಗೆ
7. ಕಛೇರಿ ಪ್ರತಿ